**<u>ಸಾಕ್ಷಿಯನ್ನು ಇಂದು ದಿ.04-04-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ.SMC ವಕೀಲರಿಂದ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ಸಂಪೂರ್ಣ ಸತ್ಯವಾಗಿರುತ್ತವೆ.

ನಾನು ಈ ಕೆಳಗಿನಂತರ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| ಅ. ನಂ | ದಾಖಲೆಗಳ ವಿವರ | ನಿಶಾನೆ |
|---|---|---|
| 1 | ರೆಪರನ್ಸ ಅರ್ಜಿಗಳು ಮತ್ತು ತಿದ್ದುಪಡಿ ರೆಪರನ್ಸ ಅರ್ಜಿಗಳು | 1 ರಿಂದ 4<br>&<br>1 ಎ ರಿಂದ 4 ಎ |
| 2 | 1 ನೇ ಎದುರುದಾರರು ಹೊರಡಿಸಿದಂತಹ ಆದೇಶದ ದೃಢೀಕೃತ ನಕಲು | 5 |
| 3 | ದಿ.14.06.2016 ಕುಮಟಗಿ ಗ್ರಾಮದ ಖರೀದಿ ಪತ್ರದ ದೃಢೀಕೃತ ನಕಲು | 6 |
| 4 | ದಿ.22.03.2016 ಕಗ್ಗೋಡ ಗ್ರಾಮದ ಖರೀದಿ ಪತ್ರದ ದೃಢೀಕೃತ ನಕಲು | 7 |
| 5 | ದಿ.23.03.2016 ಕಗ್ಗೋಡ ಗ್ರಾಮದ ಖರೀದಿ ಪತ್ರದ ದೃಢೀಕೃತ ನಕಲು | 8 |

ಆದ್ದರಿಂದ, ಎಲ್ಲ ದಾಖಲೆಗಳನ್ನು ಪರಿಶೀಲಿಸಿ ನನ್ನ ಅರ್ಜಿಯನ್ನು ಪುರಸ್ಕರಿಸಲು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲುಃ ಶ್ರೀ.C.V.B., ವಿಶೇಷ ಸರಕಾರಿ ವಕೀಲರಿಂದ 1 ಮತ್ತು 2 ನೇ ಎದುರುದಾರರ ಪರವಾಗಿಃ</u>**

1) ನಮ್ಮ ಜಮೀನು ಸರ್ವೆ ನಂ.430/2, 430/3, 430/4, 430/5 ಇದ್ದು, ಅದರಲ್ಲಿ 01 ಎಕರೆ 09 ಗುಂಟೆ ಜಮೀನು ಸ್ವಾಧೀನಗೊಂಡಿರುತ್ತದೆ. ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು 1 ರಿಂದ 3 ನೇ ಅರ್ಜಿದಾರರು ನನಗೆ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ ಎನ್ನುವುದು ನಿಜ. 1 ರಿಂದ 3 ನೇ ಅರ್ಜಿದಾರರು ನನಗೆ ಅಧಿಕಾರ ಪತ್ರ ಕೊಡದೇ ಇದ್ದುದ್ದರಿಂದ ಅವರ ಪರವಾಗಿ ಸಾಕ್ಷಿ ಹೇಳಲು ನನಗೆ ಅಧಿಕಾರ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

2) **ನಾನು ಈ ಪ್ರಕರಣವಲ್ಲದೇ ಬೇರೆ ಯಾವುದೇ ನ್ಯಾಯಾಲಯದಲ್ಲಿ ನನ್ನ ಸ್ವಾಧೀನಗೊಂಡ ಜಮೀನಿಗೆ ಸಂಬಂದಿಸಿದಂತೆ ಹೆಚ್ಚುವರಿ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುವದಿಲ್ಲ.**

3) ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಮತ್ತು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನನಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿ. ನೋಟಿಸ ಜಾರಿ ಮಾಡಿದ ನಂತರ ಅಧಿಕಾರಿಗಳು ಬಂದು ಜಂಟಿ ಸರ್ವೆ ಮಾಡಿರುತ್ತಾರೆ ಎಂದರೆ ಸರಿ. ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ **ಆಹೇರಿ** ಗ್ರಾಮಕ್ಕೆ ನಿಗದಿಮಾಡಿದ ಬೆಲೆಯನ್ನು ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

4) ಹೆಚ್ಚಿನ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ ದಿನಾಂಕ ನೆನಪಿಲ್ಲ. ಅರ್ಜಿಯನ್ನು ನಾನು ಸರಿಯಾದ ಸಮಯದಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

5) ನಮ್ಮ ಜಮೀನು ಸಂಪೂರ್ಣ ಒಣಬೇಸಾಯದ ಜಮೀನು ಎಂದರೆ ಸರಿಯಲ್ಲ. ನನ್ನ ಜಮೀನು ನೀರಾವರಿ ಜಮೀನು ಇರುತ್ತದೆ.

6) ನಿ.ಪಿ.6 ರಿಂದ 8 ಕುಮಟಗಿ ಹಾಗೂ ಕಗ್ಗೋಡ ಗ್ರಾಮಗಳ ಖರೀದಿ ಪತ್ರಗಳು ಇದ್ದು, ಸದರಿ ಖರೀದಿ ಪತ್ರಗಳು ಯಾರಿಗೆ ಸಂಬಂಧಪಟ್ಟಿದ್ದು, ಯಾವ ಉದ್ದೇಶಕ್ಕೆ ಖರೀದಿ ಆಗಿರುತ್ತದೆ, ಎಷ್ಟು ಬೆಲೆಗೆ ಖರೀದಿಸಿರುತ್ತಾರೆ ಮತ್ತು ಸರ್ವೆ ನಂಬರ ಹೇಳಲು ಬರುವುದಿಲ್ಲ. ನಾನು ಹಾಜರುಪಡಿಸಿದ ಖರೀದಿ ಪತ್ರಗಳ ಜಮೀನುಗಳು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಬರುತ್ತವೆ ಎಂದರೆ ಸರಿ. ಕುಮಟಗಿ ಗ್ರಾಮದ ಖರೀದಿ ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 10-11 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 3 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ಕಗ್ಗೋಡ ಗ್ರಾಮದ ಖರೀದಿ ಪತ್ರದ ಜಮೀನಿಗೂ ಮತ್ತು ನನ್ನ ಜಮೀನಿಗೂ ಕನಿಷ್ಠ 12 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 4 ಕಿ.ಮೀ ಅಂತರ ಇದೆ ಎಂದು ಸ್ವತಃ ಹೇಳುತ್ತಾರೆ. ನಾನು ಆಹೇರಿ ಗ್ರಾಮದ ಯಾವುದೇ ಖರೀದಿ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಹಾಜರುಪಡಿಸಿದ ಖರೀದಿ ಪತ್ರಗಳ ಜಾಗೆಗಳನ್ನು ಅಂಗಡಿ, ವ್ಯಾಪಾರ ಮತ್ತು ವಸತಿ ಉದ್ದೇಶಕ್ಕಾಗಿ ಖರೀದಿಪಡಿಸಿಕೊಂಡ ಜಾಗೆಗಳು ಆಗಿರುತ್ತವೆ ಎಂದರೆ ಸರಿ. ನನ್ನ ಜಮೀನಿಗೂ ಖರೀದಿ ಪತ್ರದ ಜಮೀನುಗಳಿಗೂ ಎಷ್ಟು ಅಂತರ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ

7) ನಾನು ಒಂದು ಎಕರೆಗೆ 70 ಲಕ್ಷ ಪರಿಹಾರ ಕೇಳಿದ್ದು, ಅದಕ್ಕೆ ಸೂಕ್ತ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸರ್ಕಾರ ಸೂಕ್ತವಾದ ಬೆಲೆ ಕೊಟ್ಟಿದ್ದರು ಸಹ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ.K.G.K., ವಕೀಲರಿಂದ ಎದುರುದಾರರ ನಂ.3 ಪರವಾಗಿಃ</u>**

8) 1ನೇ ಎದುರುದಾರರು ನನ್ನ ಜಮೀನಿಗೆ ಸಂಬಂಧಿದಂತೆ ಸೂಕ್ತ ಪರಿಹಾರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರು ನನಗೆ ಕಲಂ.37(2) ರಡಿಯಲ್ಲಿ ತಿಳುವಳಿಕೆ ನೊಟೀಸ ನೀಡಿರುತ್ತಾರೆ ಎಂದರೆ ಸರಿ. ನಾನು ಪ್ರಕರಣದಲ್ಲಿ ಹಾಜರುಪಡಿಸಿದ ನಿ.ಪಿ.6 ರಿಂದ 8 ಖರೀದಿ ಪತ್ರಗಳನ್ನು ನಾನು ನನ್ನ ಜಮೀನಿಗೆ ಸಂಬಂಧಿಸಿದಂತೆ ಹೆಚ್ಚಿನ ಪರಿಹಾರ ಕೋರಿ ಸಲ್ಲಿಸಿದ ರೆಫರೆನ್ಸ ಅರ್ಜಿಯ ಜೊತೆ ಕೊಟ್ಟಿರುವುದಿಲ್ಲ. ನಾನು ಎದುರುದಾರರಿಂದ ನನ್ನ ಜಮೀನಿಗೆ ಸಂಬಂಧಿಸಿದ ಪರಿಹಾರ ಹಣವನ್ನು ಪಡೆದಿರುತ್ತೇನೆ. ನಮ್ಮ ಜಮೀನಿಗೆ ಕಡಿಮೆ ಪರಿಹಾರ ಹಣವನ್ನು ನೀಡಿರುತ್ತಾರೆ ಎಂದು ಹೇಳಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಪರಿಹಾರ ಧನ ಪಡೆದುಕೊಳ್ಳುವ ಕಾಲಕ್ಕೆ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದು ಸೂಚಿಸುವುದು ಸುಳ್ಳು.

9) ಆಹೇರಿ ಗ್ರಾಮದಿಂದ ಕುಮಟಗಿ ಗ್ರಾಮ 6 ಕಿ.ಮೀ ದೂರದಲ್ಲಿ ಇರುತ್ತದೆ. ಆಹೇರಿ ಗ್ರಾಮದಿಂದ ನಮ್ಮ ಜಮೀನು 3 ಕಿ.ಮೀ ದೂರದಲ್ಲಿ ಇರುತ್ತದೆ. ಕುಮಟಗಿ ಮತ್ತು ಕಗ್ಗೋಡ ಗ್ರಾಮಗಳ ಮಧ್ಯದಲ್ಲಿನ ಅಂತರ ಸುಮಾರು 6-7 ಕಿ.ಮೀ ದೂರ ಇರುತ್ತದೆ. ನಿ.ಪಿ.6 ರಿಂದ 8 ರಲ್ಲಿ ನಮೂದಿಸಲಾದ ಊರುಗಳ ಜಮೀನುಗಳು ನಮ್ಮ ಜಮೀನಿಗೆ ಹೊಂದಿಕೊಂಡು ಇರುತ್ತವೆ. ಸಾಕ್ಷಿಯು ಮುಂದುವರೆದು ನಮ್ಮೂರಿನಿಂದ ಕುಮಟಗಿ ಗ್ರಾಮ 6-7 ಕಿ.ಮೀ ಅಂತರದಲ್ಲಿ ಇರುತ್ತದೆ. ನಿ.ಪಿ.6 ರಿಂದ 8 ರಲ್ಲಿ ನಮೂದಿಸಲಾದ ಜಮೀನುಗಳು ಮುಖ್ಯ ರಸ್ತೆಗೆ ಹೊಂದಿಕೊಂಡು ಇರುತ್ತವೆ ಎನ್ನುವುದು ನಿಜ. ನಮ್ಮ ಜಮೀನು ರಸ್ತೆಯಿಂದ ದೂರದಲ್ಲಿ ಇರುತ್ತದೆ ಎನ್ನುವುದು ನಿಜ. ನಿ.ಪಿ.6 ರಿಂದ 8 ರಲ್ಲಿ ನಮೂದಿಸಲಾದ ಜಮೀನುಗಳು ರಸ್ತೆಗೆ ಹೊಂದಿಕೊಂಡು ಇರುವುದರಿಂದ ಅವುಗಳ ಮಾರುಕಟ್ಟೆ ಬೆಲೆ ಹೆಚ್ಚು ಇರುತ್ತದೆ ಮತ್ತು ನಮ್ಮ ಜಮೀನು ರಸ್ತೆಯಿಂದ ದೂರ ಇದ್ದುದ್ದರಿಂದ ಅದರ ಮಾರುಕಟ್ಟೆ ಬೆಲೆ ಕಡಿಮೆ ಇರುತ್ತದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ನಿ.ಪಿ.6 ರಿಂದ 8 ರಲ್ಲಿ ನಮೂದಿಸಲಾದ ಜಮೀನುಗಳನ್ನು ಕೃಷಿ ಕೆಲಸಕ್ಕಾಗಿ ಖರೀದಿಸಿರುತ್ತಾರೆ. ಆಹೇರಿ ಗ್ರಾಮದ ಖರೀದಿ ಪತ್ರಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನಮ್ಮ ಜಮೀನಿಗೆ ಕಗ್ಗೋಡ ಹಾಗೂ ಕುಮಟಗಿ ಗ್ರಾಮದ ಜಮೀನುಗಳು ಹೊಂದಿಕೊಂಡು ಇರುತ್ತವೆ.

10) ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು ನನ್ನ ಜಮೀನಿಗೆ ಸಂಬಂಧಿಸಿದಂತೆ ಸುಳ್ಳು ಸಂಗತಿಗಳನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿ.ಪಿ.6 ರಿಂದ 8 ಖರೀದಿ ಪತ್ರಗಳ ಜಮೀನುಗಳು ನನ್ನ ಜಮೀನಿಗೆ ಅಂದಾಜು 5-6 ಕಿ.ಮೀ ಅಂತರದಲ್ಲಿ ಇರುತ್ತವೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

11) 1ನೇ ಎದುರುದಾರರು ನಮ್ಮ ಊರು **ಆಹೇರಿ** ಗ್ರಾಮದ ಎಲ್ಲ ಜಮೀನುಗಳ ಮಾರುಕಟ್ಟೆ ಬೆಲೆಯ ಅಂಕಿ-ಅಂಶಗಳನ್ನು ಪರಿಗಣಿಸಿ ನನ್ನ ಜಮೀನಿಗೆ ಸೂಕ್ತ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆಹೇರಿ ಗ್ರಾಮದಲ್ಲಿ ಸಾಕಷ್ಟು ಜಮೀನುಗಳು ಖರೀದಿಯಾಗಿದ್ದು, ಅವುಗಳು ಕಡಿಮೆ ಬೆಲೆಗೆ ಖರೀದಿಯಾಗಿರುವ ಕಾರಣ ನಾನು ನನ್ನ ಜಮೀನಿಗೆ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ನಾನು ಆಹೇರಿ ಗ್ರಾಮದ ಯಾವುದೇ ಖರೀದಿ ಪತ್ರಗಳನ್ನು ಹಾಗೂ ಖರೀದಿ ಒಪ್ಪಂದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.6 ರಿಂದ 8 ಖರೀದಿ ಪತ್ರಗಳು ನನ್ನ ಪ್ರಕರಣಕ್ಕೆ ಪೂರಕವಾದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ.

12) ನಾನು ಯಾವುದೇ ಸೂಕ್ತ ದಾಖಲೆಗಳನ್ನು ಹಾಜರುಪಡಿಸದೇ ಹೆಚ್ಚಿನ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದು, ಅದಕ್ಕೆ ನಾನು ಅರ್ಹ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಸಂಬಂಧಿಸಿದಂತೆ ಎದುರುದಾರರು ಅವಾರ್ಡ ಪಾಸ ಮಾಡುವ ಮೊದಲು ನನ್ನ ಜಮೀನಿಗೆ ಇಂತಿಷ್ಟೇ ಮಾರುಕಟ್ಟೆ ಬೆಲೆ ಇರುತ್ತದೆ ಎಂದು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

13) ನನ್ನ ಜಮೀನಿಗೆ ಸಂಬಂಧಿಸಿದಂತೆ 1 ನೇ ಎದುರುದಾರರು ಕಲಂ.26 ರ ಅಡಿಯಲ್ಲಿ ಹೇಳಿರುವ ಎಲ್ಲ ವಿಧಾನಗಳನ್ನು ಅನುಸರಿಸಿ ಸರಿಯಾದ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ.ಹೀಗಾಗಿ ನಾನು ಹಾಜರುಪಡಿಸಿದ ನಿ.ಪಿ.6 ರಿಂದ 8 ಖರೀದಿ ಪತ್ರಗಳ ಆಧಾರದ ಮೇಲೆ ನನ್ನ ಜಮೀನಿಗೆ ಹೆಚ್ಚಿನ ಪರಿಹಾರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

14) ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ, ನನ್ನ ಜಮೀನದಿಂದ ವರ್ಷಕ್ಕೆ ಇಂತಿಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಲು ನಾನು ಯಾವುದೇ ಪೂರಕವಾದ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ಮುಂದುವರೆದು 3 ನೇ ಎದುರುದಾರರ ಪರ ವಕೀಲರು 1 ಮತ್ತು 2 ನೇ ಎದುರುದಾರರ ಪರವಾಗಿ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ.